ಪುರಸಭಾ ಕಾರ್ಯಾಲಯ, ಉಳ್ಳಾಲ

ದಕ್ಷಿಣ ಕನ್ನಡ ಜಿಲ್ಲೆ, ಅಂಚೆ : ಉಳ್ಳಾಲ - 575 020

Website : www.ullaltown.gov.in Email : co.ullal@gmail.com

ದೂರವಾಣಿ
ಕಛೇರಿ : 2466226
ಫ್ಯಾಕ್ಸ್ : 2468226
ಸಹಾಯವಾಣಿ : 2462126

ದಿನಾಂಕ 31-12-2009ನೇ ಗುರುವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಿ: ಅದ್ಯಕ್ಷರು ಮತ್ತು ಸದಸ್ಯರು
-----------

ಸಭೆಯ ಪ್ರಾರಂಭದಲ್ಲಿ ನಿಧನರಾದ ಚಿತ್ರನಟ ಡಾ.ವಿಷ್ಣುವರ್ಧನ್ ಮತ್ತು ಶ್ರೀ ಆಶ್ವತ್ಥ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ವಿಷಯ: 192: ಹಿಂದಿನ ಸಾಮಾನ್ಯ ಸಭೆಯ ನಡವಳಿ (30-11-2009) ಮತ್ತು ಸ್ಥಾಯಿಸಮಿತಿ ಸಭೆಯ (19-12-2009)ನಡವಳಿಯನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 193ನವೆಂಬರ್ 2009 ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 194: 2010ರಲ್ಲಿ ನಡೆಯಲಿರುವ ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸು ಸಮಾರಂಭದ ಬಗ್ಗೆ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸುವರೇ ತಯಾರಿಸಲಾದ ಕ್ರಿಯಾಯೋಜನೆಯನ್ನು ಮಂಜೂರು ಮಾಡಿ ಟೆಂಡರು ಕರೆಯುವ ಕುರಿತು.

1. ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸ್ ಸಮಾರಂಭ ಸಮಯದಲ್ಲಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಒಟ್ಟು 60 ಜನ ಪೌರಕಾರ್ಮಿಕರನ್ನು ಮತ್ತು ಪ್ರತಿ ಹತ್ತು ಜನಕ್ಕೆ ಒಬ್ಬ ಮೇಲ್ವಿಚಾರಕರನ್ನು ಹಾಗೂ ಪ್ರತಿದಿನ ಲಾರಿ ನಿಯೋಜಿಸಿ ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಉರೂಸು ಸಮಾರಂಭದ ಪರಿಸರ ಮತ್ತು ರಸ್ತೆಗಳಲ್ಲಿ ಗುಡಿಸಿ ಕಸ ಸಂಗ್ರಹಿಸಿ ಚರಂಡಿ ಕೊಳಚೆ ಹೂಳೆತ್ತಿ ಮಂಗಳೂರು ಮಹಾನಗರಪಾಲಿಕೆಯ ಡಂಪಿಂಗ್ ಗ್ರೌಂಡಿಗೆ ಸಾಗಿಸುವುದು. ಕ್ರಿಮಿನಾಶಕಗಳನ್ನು ಸಿಂಪಡಿಸುವುದು ನೈರ್ಮಲ್ಯಕ್ಕೆ ಸಂಭಂಧಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು.

2. ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸ್ ಸಮಾರಂಭದ ಬಗ್ಗೆ ನೈರ್ಮಲ್ಯ ಕಾಮಗಾರಿಗೆ ಕ್ರಿಮಿನಾಶಗಳನ್ನು ಬ್ಲಿಚೀಂಗ್ ಪೌಡರ್ ಫಿನಾಯಿಲ್ ಸುಣ್ಣದ ಹುಡಿ ಇತ್ಯಾದಿ ಮತ್ತು ಸಾಮಾಗ್ರಿ ಸಲಕರಣೆಗಳನ್ನು ಒದಗಿಸುವ ಬಗ್ಗೆ.

3. ಉರೂಸ್ ಸಮಾರಂಭದ ಅವಧಿಯಲ್ಲಿ ರಸ್ತೆಯಲ್ಲಿ ಧೂಳು ನಿಯಂತ್ರಿಸಲು ರಸ್ತೆಯ ಮೇಲ್ಮೈಗೆ ನೀರು ಸಿಂಪಡಿಸುವುದು ಟ್ಯಾಂಕರುಗಳ ನೀರಿನ ಸಾಮಾರ್ಥ್ಯವನ್ನು ಟ್ರಿಪ್ ಒಂದರ ದರವನ್ನು ನೀಡುವುದು( ಈ ದರದಲ್ಲಿ ರಸ್ತೆಯ ಶೋಲ್ಡರ್‌ಗಳಲ್ಲಿ ನೀರನ್ನು ಹನಿಹನಿಯಾಗಿ ಸಿಂಪಡಿಸುವುದು ಎಲ್ಲಾ ಕೆಲಸ ಸೇರಿದಂತೆ)

4. ಉಳ್ಳಾಲ ಸೈಯದ್ ಮದನಿ ದರ್ಗಾದ 19ನೇ ಉರೂಸು ಸಮಾರಂಭದ ಯಾತ್ರಾರ್ಥಿಗಳಿಗೆ ನಿರಂತರವಾಗಿ ಕುಡಿಯುವ ನೀರಿನ ಪೂರೈಕೆ ಕೊಳವೆಬಾವಿ ನಿರ್ಮಾಣ

5. ಉರೂಸು ಸಂದರ್ಭದ ಅವಧಿಯಲ್ಲಿ ಬರಲಿರುವ ಯಾತ್ರಿಕರ ಉಪಯೋಗಕ್ಕಾಗಿ ಶೌಚಾಲಯ ನಿರ್ಮಿಸುವುದು(ಕಾಂಕ್ರೀಟುಬೇಸಿನ್ ಪಾನೆಲ್:ಎಂ.ಎಸ್.ಜಿ.ಐ.ಶೀಟು ಬಳಸಿ ಸುತ್ತುಗೋಡೆ ನಿರ್ಮಿಸಿ ಮುಚ್ಚುಗುಂಡಿ ತಳಪಾಯ ಪಿಂಗಾಣಿ ಬೇಸಿನ್ ಅಳವಡಿಸಿದ ತಾತ್ಕಾಲಿಕ ಶೌಚಾಲಯ ನಿರ್ಮಿಸಲು ಅರ್ಹ ಗುತ್ತಿಗೆದಾರರಿಂದ ದರಗಳನ್ನು ಸೂಚಿಸಿದ ಹಾಗೂ ಉದ್ದೇಶದ ನಕ್ಷೆಗಳೊಂದಿಗೆ ಪ್ರತಿಯೊಂದು ಬ್ಲಾಕ್‌ಗೆ ತಗಲುವ ವೆಚ್ಚಗಳನ್ನು ನಮೂದಿಸುವುದು 6 ಕಡೆ(ಒಟ್ಟು 30 ದಿನಗಳಿಗೆ)

6. ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸು ಸಮಾರಂಭದ ಸಮಯ ನೀರು ಸರಬರಾಜು ದಾರಿದೀಪಗಳ ದುರಸ್ತಿ ನಗರ ಸ್ವಚ್ಛತೆ ಕಾಮಗಾರಿ ಹಾಗೂ ನಾಗರಿಕ ಸೌಲಭ್ಯಗಳ ಉಸ್ತುವಾರಿಗಾಗಿ 2 ತಿಂಗಳ ಅವಧಿಗೆ ದಿನ ಒಂದರ ಗರಿಷ್ಟ

90ಕಿ.ಮೀ ಕ್ರಮಿಸಲು ಹಾಗೂ ಇಂಧನ ಮತ್ತು ಚಾಲಕನನ್ನು ಒಳಗೊಂಡ ಉತ್ತಮ ಸ್ಥಿತಿಯಲ್ಲಿರುವ ವಾಹನವನ್ನು ವಾಹನ ಮಾಲಕರಿಂದ ಬಾಡಿಗೆ ನೆಲೆಯಲ್ಲಿ ಒದಗಿಸಲು ದಿನವೊಂದಕ್ಕೆ ಬಾಡಿಗೆ ನಮೂದಿಸಿದ ದರ ಪಟ್ಟಿಯಲ್ಲಿ ನೀಡುವುದು.

7. ಉಳ್ಳಾಲ ಪುರಸಭಾ ಕಚೇರಿಗೆ ಸುಣ್ಣಬಣ್ಣ ಬಳಿಯುವ ಕುರಿತು

8. ಉಳ್ಳಾಲ ಪುರಸಭೆಯ ಹೆಸರಿನಲ್ಲಿ ಸ್ವಾಗತ ಕಮಾನನ್ನು ಅಳವಡಿಸುವ ಕುರಿತು

9. ಉಳ್ಳಾಲ ಸೈಯ್ಯದ್ ಮದನಿ ದರ್ಗಾದ ಮುಖ್ಯದ್ವಾರದ ಎದುರುಗಡೆ ದೊಡ್ಡ ಹೈಮಾಸ್ಟ್ ದೀಪ ಆಳವಡಿಸುವುದು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಟೆಂಡರು ಕರೆಯುವುದಾಗಿ ರ್ಣಯಿಸಲಾಯಿತು.

ವಿಷಯ: 195: ದಿನಾಂಕ 30-12-2009ರಂದು ತೆರೆದ ಎಸ್.ಎಫ್.ಸಿ ಮುಕ್ತನಿಧಿ 2009-2010ರ ಸಾಲಿನ ಟೆಂಡರು ಮಂಜೂರಾತಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೆಳಗಿನಂತೆ ಮಂಜೂರಾತಿ ನೀಡುವುದಾಗಿ ನಿರ್ಣಯಿಸಲಾಯಿತು.

1. 6(4)ಉಳ್ಳಾಲ ಪುರಸಭಾ ವ್ಯಾಪ್ತಿಯ 3ನೇ ವಾರ್ಡು ಶಾರದಾ ನಿಕೇತನದಿಂದ ಡಿ ರಸ್ತೆಯಿಂದ ಸಿ. ರಸ್ತೆಯವರೆಗೆ ಮತ್ತು ಬೀಚ್ ರಸ್ತೆ ಅಭಿವೃದ್ಧಿಪಡಿಸಿ ಪೆವರ್ ಫಿನಿಶ್ ಡಾಮಾರೀಕರಣ(ರೂ.3.50ಲಕ್ಷ) 6(16) ಉಳ್ಳಾಲ ಪುರಸಭಾ ವ್ಯಾಪ್ತಿಯ 11ನೇ ವಾರ್ಡು ಬಿರ್ಲಾ ಕಂಪೌಂಡಿನ ಒಳರಸ್ತೆಗಳನ್ನು ಅಭಿವೃದ್ದಿಪಡಿಸಿ ಫೆವರ್ ಪಿನಿಶ್ ಡಾಮಾರೀಕರಣ(ರೂ. 5.50ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಒಂದೇ ಟೆಂಡರು ಸಲ್ಲಿಕೆಯಾಗಿರುವುದರಿಂದ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

2. 6(14) ಉಳ್ಳಾಲ ಪುರಸಭಾ ವ್ಯಾಪ್ತಿಯ 10ನೇ ವಾರ್ಡು ಹಳೇಕೋಟೆ ಕೆರೆ ರಸ್ತೆ ಮತ್ತುಅಲೇಕಲ ಪಟೇಲ್ ಕಂಪೌಂಟು ಕ್ರಾಸ್ ರಸ್ತೆಯಿಂದ ಹಸನಬ್ಬರವರ ಮನೆಯವರೆಗೆ ಅಭಿವೃದ್ದಿ ಪಡಿಸಿ ಫೆವರ್ ಪಿನಿಶ್ ಡಾಮಾರೀಕರಣ(ರೂ. 2.00ಲಕ್ಷ) 6(8) ಉಳ್ಳಾಲ ಪುರಸಭಾ ವ್ಯಾಪ್ತಿಯ 6ನೇ ವಾರ್ಡು ಉಳಿಯ ಕೊಪ್ಪಲ ರಸ್ತೆಗೆ ಬದಿಕಟ್ಟೆ ಅಭಿವೃದ್ದಿ ಪಡಿಸುವುದು ಮತ್ತು ಹೊಯಿಗೆ ಡೈಮಂಡ್ ಮೊದಲ ಕ್ರಾಸ್ ರಸ್ತೆ ಮೆಟಲಿಂಗ್ ಮಾಡುವುದು(ರೂ 5.50ಲಕ್ಷ)6(2) ಉಳ್ಳಾಲ ಪುರಸಭಾ ವ್ಯಾಪ್ತಿಯ 2ನೇ ವಾರ್ಡು ಕೋಡಿ ಎವರ್‌ಗ್ರೀನ್‌ರವರ ಮನೆ ಬಳಿಯಿಂದ ಟಿಪ್ಪುಸುಲ್ತಾನ್ ಶಾಲೆಯವರೆಗೆ ಫೆವರ್ ಪಿನಿಶ್ ಡಾಮಾರೀಕರಣ(ರೂ.3.00ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಒಂದೇ ಟೆಂಡರು ಸಲ್ಲಿಕೆಯಾಗಿರುವುದರಿಂದ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

3. 6(11) ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡು ಕಕ್ಕೆತೋಟ ಪಾಂಡೆಲಪಕ್ಕ ರಸ್ತೆಗಳ ಡಾಮಾರೀಕರಣ ಮತ್ತು ಚರಂಡಿ ಕಾಂಕ್ರೀಟಿಕರಣ(ರೂ. 6.00ಲಕ್ಷ) 6(15) ಉಳ್ಳಾಲ ಪುರಸಭಾ ವ್ಯಾಪ್ತಿಯ 10ನೇ ವಾರ್ಡು ಹಳೇಕೋಟೆ ಮುಳಿಗುಡ್ಡೆ ರಸ್ತೆ ಫೆವರ್ ಪಿನಿಶ್ ಡಾಮಾರೀಕರಣ(ರೂ. 3.50ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಒಂದೇ ಒಂದು ಟೆಂಡರು ಸಲ್ಲಿಕೆಯಾಗಿರುವುದರಿಂದ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

4. ಉಳ್ಳಾಲ ಪುರಸಭಾ ವ್ಯಾಪ್ತಿಯ 14ನೇ ವಾರ್ಡಿನ ಮುಕ್ಕಚೇರಿ ಇಲ್ಯಾಸ್‌ರವರ ಮನೆ ಎದುರಿನಿಂದ ಮುಕ್ಕಚೇರಿ ಮಸೀದಿಯಾಗಿ ಬೇಕರಿಯವರೆಗೆ ಚರಂಡಿ ರಚನೆ ಮತ್ತು ಡೈಮಂಡ್ ರಸ್ತೆಗೆ ಡಾಮಾರೀಕರಣ(ರೂ. 4.00ಲಕ್ಷ) 6(2) ಉಳ್ಳಾಲ ಪುರಸಭಾ ವ್ಯಾಪ್ತಿಯ 15ನೇ ವಾರ್ಡಿನ ಧರ್ಮನಗರ ದೇವಿ ಪ್ಯಾನ್ಸಿ ಬಳಿಯಿಂದ ಅಬ್ಬಕ್ಕನಗರ ರಿಚ್ಚಿ ಡಿಸೋಜರ ಮನೆತನಕ ರಸ್ತೆ ಫೆವರ್ ಪಿನಿಶ್ ಡಾಮಾರೀಕರಣ(ರೂ. 5-00ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಒಂದೇ ಒಂದು ಟೆಂಡರು ಸಲ್ಲಿಕೆಯಾಗಿರುವುದರಿಂದ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

5. 6(7) ಉಳ್ಳಾಲ ಪುರಸಭಾ ವ್ಯಾಪ್ತಿಯ 20ನೇ ವಾರ್ಡಿನ ಕಾಪಿಕಾಡು 1ನೇ ಅಡ್ಡರಸ್ತೆಗೆ ಫೆವರ್ ಪಿನಿಶ್ ಡಾಮರೀಕರಣ ಮತ್ತು ಆರ್.ಸಿ.ಸಿ ಚರಂಡಿ ರಚನೆ(5.00ಲಕ್ಷ) 6(13) ಉಳ್ಳಾಲ ಪುರಸಭಾ ವ್ಯಾಪ್ತಿಯ 26ನೇ ವಾರ್ಡಿನ ಬಬ್ಬುಕಟ್ಟೆ ದ.ಕ.ಜಿ.ಪ.ಶಾಲಾ ಹಿಂಬಂದಿ ರಸ್ತೆ ಮತ್ತು ಜಮಾಲ್ ಕಂಪೌಂಡು ರಸ್ತೆ ಫೆವರ್‌ಫಿನಿಶ್ ಡಾಮಾರೀಕರಣ(ರೂ. 5.50ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಒಂದೇ ಒಂದು ಟೆಂಡರು ಸಲ್ಲಿಕೆಯಾಗಿರುವುದರಿಂದ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

6. 6(8) ಉಳ್ಳಾಲ ಪುರಸಬಾ ವ್ಯಾಪ್ತಿಯ 21ನೇ ವಾರ್ಡಿನ ಮಾರ್ಗತಲೆ ಉಳಿಯ ರಸ್ತೆಯಿಂದ ಹೊಯಿಗೆಹಿತ್ಲು ಚಿರ್ಕುನ್ ಮೋಂತೆರೋ ರಸ್ತೆ ಅಭಿವೃದ್ದಿ ಪಡಿಸುವುದು(ರೂ. 5.00ಲಕ್ಷ) 16(15) ಉಳ್ಳಾಲ ಪುರಸಭಾ ವ್ಯಾಪ್ತಿಯ 27ನೇ ವಾರ್ಡಿನ ತೊಡ್ಡಲ ಸೈಟು ಗಂಡಿ ಫ್ರೀಡ ಟೀಚರ್ ಮನೆ ಬಳಿಯಿಂದ ಕಾಯಂಗಳಕ್ಕೆ ಹೋಗುವ ರಸ್ತೆ ಅಭಿವೃದ್ದಿ ಪಡಿಸುವುದು. (ರೂ 2.75ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಅಬ್ದುಲ್ ರಹಿಮಾನ್ ಇವರ ಟೆಂಡರುದರ ಅಂದಾಜುಪಟ್ಟಿಯ ದರ ಸೇ 7.59 ಕಡಿಮೆ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

7. 6(12) ಉಳ್ಳಾಲ ಪುರಸಭಾ ವ್ಯಾಪ್ತಿಯ 25ನೇ ವಾರ್ಡಿನ ಬಬ್ಬುಕಟ್ಟೆಯಿಂದ ದಾರಂದಬಾಗಿಲು ನಿಸರ್ಗರವರ ಮನೆ ಬಳಿಯವರೆಗೆ ಲಿಂಕ್ ರಸ್ತೆ ಅಭಿವೃದ್ದಿ ಪಡಿಸುವುದು9ರೂ. 6.00ಲಕ್ಷ) 6(14) ಉಳ್ಳಾಲ ಪುರಸಭಾ ವ್ಯಾಪ್ತಿಯ 27ನೇ ವಾರ್ಡುನ ಎಡಿಬಿ ರಸ್ತೆಯಿಂದ ನಬಾರ್ಡು ರಸ್ತೆಯವರೆಗೆ ರಸ್ತೆ ಅಭಿವೃದ್ದಿಪಡಿಸುವುದು(ರೂ. 2.75ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಒಂದೇ ಒಂದು ಟೆಂಡರು ಸಲ್ಲಿಕೆಯಾಗಿರುವುದರಿಂದ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

8. 6(5) ಉಳ್ಳಾಲ ಪುರಸಭಾ ವ್ಯಾಪ್ತಿಯ 3ನೇ ವಾರ್ಡು ಯಮುನಾ ಸಾಲ್ಯಾನ್‌ರವರ ಮನೆಯಿಂದ ಉದಯ ಸಾಲ್ಯಾನ್ ಮನೆತನಕ ಇಂಟರ್‌ಲಾಕ್ ಅಳವಡಿಸುವುದು(ರೂ. 2.00ಲಕ್ಷ) 6(7) ಉಳ್ಳಾಲ ಪುರಸಭಾ ವ್ಯಾಪ್ತಿಯ 5ನೇ ವಾರ್ಡು ಕೋಡಿ ಕೆಳಗಿನ ಬೀದಿ ರಸ್ತೆ ಬದಿ ಕಟ್ಟಿ ಅಭಿವೃದ್ದಿಪಡಿಸುವುದು. ಕೋಡಿ ಜಾರ ಬಳಿ ರಸ್ತೆಗೆ ಇಂಟರ್ ಲಾಕ್ ಅಳವಡಿಸುವುದು(ರೂ. 4.00ಲಕ್ಷ) 6(13)ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡು ಅಲೇಕಲ ಆರ್.ಕೆ.ಬಾವ ಮನೆಯಿಂದ ಮೇಸ್ತ್ರಿಹಂಝರವರ ಮನೆಯವರೆಗೆ ಇಂಟರ್‌ಲಾಕ್ ಅಳವಡಿಸುವುದು(ರೂ. 2.00ಲಕ್ಷ) 6(17) ಉಳ್ಳಾಲ ಪುರಸಭಾ ವ್ಯಾಪ್ತಿಯ 12ನೇ ವಾರ್ಡು ಬಾಬು ಕಂಪೌಂಡು ಪ್ರದೇಶದ ಬಾವಿಯ ಬಳಿಯಿಂದ ಚರಂಡಿ ಅಭಿವೃದ್ದಿ (ರೂ. 2-00ಲಕ್)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಎಚ್. ಅಬ್ದುಲ್ ರಹಿಮಾನ್ ಕಾಟಿಪಳ್ಳ ಇವರ ಟೆಂಡರುದರ ಅಂದಾಜುಪಟ್ಟಿಯ ದರ ಶೇ 6.08 ಕಡಿಮೆ ದರ ಕನಿಷ್ಟ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

9. 6(1) ಉಳ್ಳಾಲ ಪುರಸಭಾ ವ್ಯಾಪ್ತಿಯ 1ನೇ ವಾರ್ಡು ಡಿ ರಸ್ತೆಯಲ್ಲಿ ಕೋಟೆಪುರ ಜುಮ್ಮಾ ಮಸೀದಿ ಗೇಟಿನ ಎದುರಿನಿಂದ ನದಿಯವರೆಗೆ ಕಾಂಕ್ರೀಟ್ ಚರಂಡಿ ರಚನೆ(ರೂ. 6.00ಲಕ್ಷ) 6(12) ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡು ಹಳೇಕೋಟೆ ಗುಡ್ಡೆ ಮಹಮ್ಮದ್‌ರವರ ಮನೆಯಿಂದ ಯು,ಎಚ್ ಅಬ್ಬಾಸ್‌ರವರ ಮನೆಯವರೆಗೆ ಕಾಂಕ್ರೀಟ್ ಚರಂಡಿ ರಚನೆ (ರೂ 4.00ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಎಚ್. ಅಬ್ದುಲ್ ರಹಿಮಾನ್ ಕಾಟಿಪಳ್ಳ ಇವರ ಟೆಂಡರು ದರ ಅಂದಾಜುಪಟ್ಟಿಯ ದರ ಶೇ 9.00 ಕಡಿಮೆ ದರ ಕನಿಷ್ಟ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

10. 6(18) ಉಳ್ಳಾಲ ಪುರಸಭಾ ವ್ಯಾಪ್ತಿಯ 12ನೇ ವಾರ್ಡು ಹೈದಾರಾಲಿ ನಗರ ಮುಖ್ಯರಸ್ತೆ ಮತ್ತು ಚರಂಡಿ ಅಭಿವೃದ್ದಿ(ರೂ. 4.00ಲಕ್ಷ) 6(19) ಉಳ್ಳಾಲ ಪುರಸಭಾ ವ್ಯಾಪ್ತಿಯ 13ನೇ ವಾರ್ಡಿನ ಅಜಾದ್‌ನಗರ ಕೊಜಮ್ ಹಿತ್ಲು ಮುಖ್ಯರಸ್ತೆಯ ಬದಿಗೆ ಚರಂಡಿ ವಿಸ್ತರಣೆ (ರೂ. 5.50ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಎಚ್. ಅಬ್ದುಲ್ ರಹಿಮನ್ ಕಾಟಿಪಳ್ಳ ಇವರ ಟೆಂಡರುದರ ಅಂದಾಜುಪಟ್ಟಿಯ ದರ ಶೇ9 ಕಡಿಮೆ ದರ ಕನಿಷ್ಟ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

11. 6(3) ಉಳ್ಳಾಲ ಪುರಸಭಾ ವ್ಯಾಪ್ತಿಯ 2ನೇ ವಾರ್ಡು ಹಾಜಿ ದಿ. ಇಬ್ರಾಹಿಂರವರ ಮನೆ ಬಳಿಯಿಂದ ಸಿಲ್ವಾನಿಯ ಫ್ಯಾಕ್ಟರಿ ಕ್ರಾಸ್‌ವರೆಗೆ ಕಾಂಕ್ರೀಟ್ ಚರಂಡಿ ರಚನೆ(ರೂ. 3.00ಲಕ್ಷ) 6(9) ಉಳ್ಳಾಲ ಪುರಸಭಾ ವ್ಯಾಪ್ತಿಯ 7ನೇ ವಾರ್ಡು ಮಿಲ್ಲತ್‌ನಗರ ಖತೀಬ್ ಮನೆಯ ಬಳಿಯ ತಿರುವಿನಿಂದ ಮೊದಲ್ಗೊಂಡು ಡ್ರೈವರ್ ರಶೀದ್‌ರವರ ಮನೆಯವರೆಗೆ ಚರಂಡಿ ಮತ್ತು ರಸ್ತೆ ಅಭಿವೃದ್ದಿ ಪಡಿಸುವುದು(ರೂ. 2.00ಲಕ್ಷ) 6(10) ಉಳ್ಳಾಲ ಪುರಸಭಾ ವ್ಯಾಪ್ತಿಯ 7ನೇ ವಾರ್ಡು ಕರೆಂಟ್ ಇಬ್ರಾಹಿಂರವರ ಮನೆಯಿಂದ ಖಾದರ್ ಮನೆಯವರೆಗೆ ಚರಂಡಿ ಮತ್ತು ರಸ್ತೆ ಕಾಂಕ್ರೀಟಿಕರಣ(ರೂ. 3.50ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಎಚ್. ಅಬ್ದುಲ್ ರಹಿಮಾನ್ ಕಾಟಿಪಳ್ಳ ಇವರ ಟೆಂಡರುದರ ಅಂದಾಜುಪಟ್ಟಿಯ ದರ ಶೇ 7.84 ಕಡಿಮೆ ದರ ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

12. 6(20) ಉಳ್ಳಾಲ ಪುರಸಭಾ ವ್ಯಾಪ್ತಿಯ 24ನೇ ವಾರ್ಡಿನ ಚೆಂಬುಗುಡ್ಡೆ ಮಾಮು ಬ್ಯಾರಿ ಮನೆ ಎದುರುಗಡೆಯಿಂದ ಬಾವ ಮನೆತನಕ ಆರ್.ಸಿ.ಸಿ ಚರಂಡಿ ರಚನೆ ಮಾಡಿ ಸ್ಲ್ಯಾಬ್ ಅಳವಡಿಸುವುದು(ರೂ. 4.00ಲಕ್ಷ) 6(3) ಉಳ್ಳಾಲ ಪುರಸಭಾ ವ್ಯಾಪ್ತಿಯ 16ನೇ ವಾರ್ಡಿನ ಮಾಸ್ತಿಕಟ್ಟೆ ಹಾರ್ಡ್‌ವೇರ್ ಅಂಗಡಿಯ ಹಿಂಬಂದಿಯಿಂದ ಅಹಮ್ಮದ್ ಉಸ್ತಾದ್‌ರವರ ಮನೆತನಕ ಚರಂಡಿ ರಚನೆ ಹಾಗೂ ರಸ್ತೆಗೆ ಇಂಟರ್‌ಲಾಕ್ ಅಳವಡಿಸುವುದು(ರೂ. 6.00ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳು ಕ್ರಮಬದ್ಧವಾಗಿ ಸಲ್ಲಿಸದೇ ಇರುವುದರಿಂದ ಟೆಂಡರು ತಿರಸ್ಕರಿಸಿ ಮರು ಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

13. 6(5) ಉಳ್ಳಾಲ ಪುರಸಭಾ ವ್ಯಾಪ್ತಿಯ 18ನೇ ವಾರ್ಡಿನ ತೊಕ್ಕೊಟ್ಟು ಒಳಪೇಟೆ ಅಶೋಕ ಭಗವತಿ ನಿವಾಸ ಇವರ ಮನೆಯ ಹಿಂಬಂದಿಯಿಂದ ನಾಗೇಶ್ ಗಟ್ಟಿಯವರ ಮನೆ ಹಿಂಬಂದಿಯವರೆಗೆ ಆರ್.ಸಿ.ಸಿ ಚರಂಡಿ ರಚನೆ(ರೂ. 5.00ಲಕ್ಷ) 6(6) ಉಳ್ಳಾಲ ಪುರಸಭಾ ವ್ಯಾಪ್ತಿಯ 19ನೇ ವಾರ್ಡಿನ ಓವರ್‌ಬ್ರಿಡ್ಜ್ ಗಣೇಶನಗರ ಎಂಬಲ್ಲಿ ಗಣೇಶ ಮಂದಿರದಿಂದ ಗಣೇಶ ಶೆಣೈಯವರ ಮನೆತನಕ ಎದುರುಗಡೆ ಆರ್.ಸಿ.ಸಿ. ಚರಂಡಿ ನಿರ್ಮಾಣ (ರೂ. 5.00ಲಕ್ಷ)

ನಿರ್ಣಯ: ಸದ್ರಿಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಬಿ.ಎಚ್. ಮೊಹಮ್ಮದ್ ಶರೀಫ್ ಕಾಟಿಪಳ್ಳ ಇವರ ಟೆಂಡರುದರ ಅಂದಾಜುಪಟ್ಟಿಯ ದರ ಶೇ 9,53 ಕಡಿಮೆ ದರ ಕನಿಷ್ಟ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

14. 6(9) ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡಿನ ಕೆರೆಬೈಲು ಗುಡ್ಡೆಯ ಅಜ್ಜನಕಟ್ಟೆಯಿಂದ ಪಿಂಟುಮನೆ ರಸ್ತೆಯ ಚರಂಡಿ ಅಭಿವೃದ್ಧಿ (ರೂ.6.00ಲಕ್ಷ) 6(10) ಉಳ್ಳಾಲ ಪುರಸಭಾ ವ್ಯಾಪ್ತಿಯ 24ನೇ ವಾರ್ಡಿನ ತೊಕ್ಕೊಟ್ಟು ಕೃಷ್ಣಾ ಟಾಕೀಸ್ ಹಿಂದೆ ಪಿಲಿಫ್ ಮಾಸ್ಟರ್ ಮನೆತನಕ ಇಂಟರ್‌ಲಾಕ್ ಅಳವಡಿಸುವುದು(ರೂ.3.00ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಎಚ್. ಅಬ್ದುಲ್ ರಹಿಮಾನ್ ಕಾಟಿಪಳ್ಳ ಇವರ ಟೆಂಡರುದರ ಅಂದಾಜುಪಟ್ಟಿಯ ದರ ಶೇ 5.30 ಕಡಿಮೆ ದರ ಕನಿಷ್ಟ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

15. (11) ಉಳ್ಳಾಲ ಪುರಸಭಾ ವ್ಯಾಪ್ತಿಯ 24ನೇ ವಾರ್ಡಿನ ಚೆಂಬುಗುಡ್ಡೆ ಪುತ್ತು ಮನೆಯಿಂದ ಆಲಿಯಬ್ಬ ಮನೆತನಕ ಆರ್.ಸಿ.ಸಿ ಚರಂಡಿನಿರ್ಮಾಣ(ರೂ. 2.50ಲಕ್ಷ) 6(4) ಉಳ್ಳಾಲ ಪುರಸಭಾ ವ್ಯಾಪ್ತಿಯ ಕೃಷ್ಣನಗರ ಪುರುಷೋತ್ತಮರವರ ಮನೆ ಬಳಿಯಿಂದ ಸೂರ್ಯ ಕ್ರೀಡಾಂಗಣತನಕ ಕಾಲುದಾರಿಗೆ ಇಂಟರ್‌ಲಾಕ್ ಅಳವಡಿಸುವುದು( ರೂ. 5.50ಲಕ್ಷ)

ನಿರ್ಣಯ: ಸದ್ರಿ ಕಾಮಗಾರಿಗೆ ಬಂದ ಟೆಂಡರುಗಳಲ್ಲಿ ಬಿ.ಎಚ್. ರಹಿಮಾನ್ ಕಾಟಿಪಳ್ಳ ಇವರ ಟೆಂಡರು ದರ ಅಂದಾಜುಪಟ್ಟಿಯ ದರ ಶೇ 9 ಕಡಿಮೆ ದರ ಕನಿಷ್ಟ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ: 196: 2008-09ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಶೇ18ರ ಯೋಜನೆಯ ಕ್ರಿಯಾಯೋಜನೆ ಕ್ರ.ಸಂ(5)ರಲ್ಲಿ ಉಳ್ಳಾಲ ಪುರಸಭೆ ವ್ಯಾಪ್ತಿಯ ಜಿಲ್ಲಾ ಪಂಚಾಯತ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಒಂಬತ್ತುಕೆರೆ, ಬಬ್ಬುಕಟ್ಟೆ ಶಾಲೆ ಮತ್ತು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಾಪಿಕಾಡು ಶಾಲೆಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಗತ್ಯವಿರುವ ಪೀಠೋಪಕರಣ ಮತ್ತು ಕಂಪ್ಯೂಟರ್ ವ್ಯವಸ್ಥೆ ಒದಗಿಸುವ ಬಗ್ಗೆ ಕಾಫಿಕಾಡು ಕಿರಿಯ ಪ್ರಾಥಮಿಕ ಶಾಲೆ ಮುಚ್ಚಿದ ಕಾರಣ ಎರಡು ಶಾಲೆಗಳಿಗೆ ವಿತರಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಎರಡು ಶಾಲೆಗಳಿಗೆ ವಿತರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 197:ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ಅಂಬೇಡ್ಕರ್ ರಂಗಮಂದಿರದ ಅಂಗನವಾಡಿ ಕೇಂದ್ರಕ್ಕೆ ಸ್ವ.ಜ.ಶ.ಯೋಜನೆಯಡಿ 2008-09ನೇ ಸಾಲಿನಲ್ಲಿ ಶೌಚಾಲಯ ರಚನೆಗಾಗಿ ರೂ. 25,000/- ಮೊತ್ತದ ಅಂದಾಜುಪಟ್ಟಿ ಸಲ್ಲಿಸಿ ಮಂಜೂರಾತಿ ದೊರಕಿರುತ್ತದೆ. ಈ ಕಾಮಗಾರಿಯ ಕೆಲಸ ಪೂರ್ಣಗೊಂಡಿದ್ದು ಈ ಬಗ್ಗೆ ಎಸ್.ಜೆ.ಎಸ್.ಅರ್.ವೈಯಡಿ ಲಭ್ಯವಿದ್ದ 18493-00 ಅನುದಾವನ್ನು ಬಳಸಿಕೊಂಡಿದ್ದು, ಉಳಿಕೆ ಮೊತ್ತ ರೂ. 6507-00ನ್ನು ಪುರಸಭಾ ನಿಧಿಯಿಂದ ಭರಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳಿಕೆ ಮೊತ್ತ ರೂ. 6507/-ನ್ನು ಪುರಸಭಾ ನಿಧಿಯಿಂದ ಭರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 198: ಕೆಯುಐಡಿಎಫ್‌ಸಿಯವರ ಕುಡಿಯುವ ನೀರಿನ ಕಾರ್ಯವೈಖರಿ ಬಗ್ಗೆ
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೆಯುಐಡಿಎಫ್‌ಸಿ ಅಧಿಕಾರಿಗಳ ಸಭೆ ಕರೆದು ನಂತರ ಮುಂದಿನ ಸಾಮಾನ್ಯ ಸಭೆಯಲ್ಲಿ ಚರ್ಚಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 199: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲೈವ್ ಆಗಿರುವ ವಾರ್ಡುಗಳಲ್ಲಿ ರಸ್ತೆ ನಾಮಫಲಕ ಮತ್ತು ಮನೆ ನಂಬ್ರ ಪ್ಲೇಟ್ ಅಳವಡಿಸುವ ಕುರಿತು ಆಯುಕ್ತರು ಪೌರಾಡಳಿತ ನಿರ್ದೇಶನಾಲಯ ಪೌರಸುಧಾರಣಾ ಕೋಶ, ಬೆಂಗಳೂರು ಇವರಿಂದ ಬಂದ ನೆನಪೋಲೆ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 200: ಉಳ್ಳಾಲ ಪುರಸಭಾ ವ್ಯಾಪ್ತಿಯ ಕಲ್ಲಾಪಿನ ಕುದ್ರು ಸಂಪರ್ಕಿಸುವ ನೂತನ ರಸ್ತೆಯನ್ನು ಪಟ್ಲಾ ಶಾಲೆಯ ಸಂಪರ್ಕಿಸುವ ರಸ್ತೆಗೆ ಸಂಪರ್ಕ ಕಲ್ಪಿಸಿಕೊಡಬೇಕಾಗಿ ಸ್ಥಳೀಯ ಸದಸ್ಯರಾದ ಶ್ರೀಮತಿ ಪ್ರಮೋದಿನಿ ಮತ್ತು ಶ್ರೀ ದಿನಕರ್ ಉಳ್ಳಾಲ್ ರವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಕಾಮಗಾರಿಗೆ ಹಲವಾರು ಭಾರಿ ಪುರಸಭಾ ನಿಧಿಯಿಂದ ಮಾಡುವರೇ ನಿರ್ಣಯ ಆಗಿದ್ದರೂ ಹಣಕಾಸು ಲಭ್ಯವಿಲ್ಲದಿರುವುದರಿಂದ ಈ ಕಾಮಗಾರಿಯನ್ನು ಎಸ್.ಎಫ್.ಸಿ ಅಥವಾ ಇತರ ಅನುದಾನದಿಂದ ಕೈಗೊಳ್ಳಲು ಸದಸ್ಯರಾದ ಶ್ರೀ ದಿನಕರ ಉಳ್ಳಾಲರವರ ಪ್ರಸ್ತಾವನೆಗೆ ಸಭೆಯು ಅನುಮೋದಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 201: ಸುಳ್ಯದಲ್ಲಿ ದಿನಾಂಕ 26-12-2009ರಿಂದ 28-12-2009ರತನಕ ಏರ್ಪಡಿಸಿರುವ ರಾಜ್ಯ ಯುವಜನ ಮೇಳಕ್ಕೆ ಸಂಪೂರ್ಣ ಸಹಕಾರವನ್ನು ಯಾಚಿಸುತ್ತಾ ರೂ 25,000 ಅನುದಾನವನ್ನು ಪುರಸಭೆಯಿಂದ ದೇಣಿಗೆಯಾಗಿ ನೀಡಬೇಕೆಂದು ಸಂಚಾಲಕರು ರಾಜ್ಯ ಯುವಜನ ಮೇಳ 2008-09, ಯುವಜನ ಸೇವಾ ಕ್ರೀಡಾ ಇಲಾಖೆ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ರೂ 5000-00ವನ್ನು ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:: 202: ಉಳ್ಳಾಲ ಪುರಸಭೆ ವ್ಯಾಪ್ತಿಯ 27ನೇ ವಾರ್ಡಿನ ಮುನ್ನೂರು ಗಡಿಯ ನದಿ ತೀರದಿಂದ ರಾಣಿಪುರ ಮುಖ್ಯರಸ್ತೆಗೆ ಸೇರುವ ಕೆಮ್ಮಡೆ ಎಂಬಲ್ಲಿ ರಸ್ತೆ ದುರಸ್ತಿ ಮತ್ತು ಮೋರಿ ರಚನೆ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ಪ್ರಮೋದಿನಿ ಮತ್ತು ಶ್ರೀ ದಿನಕರ್ ಉಳ್ಳಾಲ್‌ರವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಕಾಮಗಾರಿಗೆ ಹಲವಾರು ಬಾರಿ ಪುರಸಭಾ ನಿಧಿಯಿಂದ ಮಾಡುವರೇ ನಿರ್ಣಯ ಆಗಿದ್ದರೂ ಹಣಕಾಸು ಲಭ್ಯವಿಲ್ಲದಿರುವುದರಿಂದ ಈ ಕಾಮಗಾರಿಯನ್ನು ಎಸ್.ಎಫ್.ಸಿ ಅಥವಾ ಇತರ ಅನುದಾನದಿಂದ ಕೈಗೊಳ್ಳಲು ಸದಸ್ಯರಾದ ಶ್ರೀ ದಿನಕರ್ ಉಳ್ಳಾಲ್‌ರವರು ಪ್ರಸ್ತಾವನೆಗೆ ಸಭೆಯು ಅನುಮೋದಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 203: ಉಳ್ಳಾಲ ಪುರಸಭೆ ವ್ಯಾಪ್ತಿಯ 25ನೇ ವಾರ್ಡಿನ ಪೆರ್ಮನ್ನೂರು ಗ್ರಾಮದ ನಾರಾಯಣ ಹೋಟೆಲಿನಿಂದ(ಶಿವಾಜಿನಗರ) 3ನೇ ಅಡ್ಡರಸ್ತೆ, ಶ್ರೀನಿಧಿ ಮನೆತನಕ ಕುಡಿಯುವ ನೀರಿನ ಕೊಳವೆಯನ್ನು ವಿಸ್ತರಣೆ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ರತ್ನಾವತಿಯವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 204: ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡಿನಲ್ಲಿ ಈ ಕೆಳಗಿನ ಕಾಮಗಾರಿ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಅಬ್ದುಲ್ ಪತ್ತಾಕ್ ರವರ ಮನವಿ ಕುರಿತು.

1.ಹಳೇಕೋಟೆ ಗುಡ್ಡೆ ಶೇಕಬ್ಬರವರ ಮನೆಯಿಂದ ಸರಕಾರಿ ಬಾವಿಯವರೆಗೆ ಕಾಂಕ್ರೀಟ್ ಚರಂಡಿ ರಚಿಸಿ ಕಾಂಕ್ರೀಟ್ ಸ್ಲ್ಯಾಬ್ ರಚಿಸುವುದು

2) ಮಿಲ್ಲತ್‌ನಗರ ವಾಟರ್ ಪಂಪಿನಿಂದ ಎರಡೂವರೆ ಇಂಚಿನ ಪಿ.ವಿಸಿ ಪೈಪು 150ಮೀಟರ್ ಬದಲಾಯಿಸುವುದು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 205: ಉಳ್ಳಾಲ ಪುರಸಭೆಯ 6ನೇ ವಾರ್ಡಿನಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ಮಣ್ಣು ಹಾಕಿ ರಸ್ತೆ ಸಂಪರ್ಕಿಸಲು ಸ್ಥಳೀಯ ಸದಸ್ಯರಾದ ಶ್ರೀ ಸುಂದರ ಉಳಿಯ ಇವರ ಮನವಿ ಕುರಿತು.

1. ಡೈಮಂಡ್ ರಸ್ತೆಯಿಂದ ವಿಕ್ಟರ್ ಮನೆಯವರೆಗೆ
2. ಡೈಮಂಡ್ ರಸ್ತೆಯಿಂದ ಫ್ರಾನ್ಸಿಸ್ ಮನೆಯವರೆಗೆ
3. ಉಳಿಯ ಮಣ್ಣಿನ ರಸ್ತೆಯಿಂದ ಜನಾರ್ದನ ಮನೆಯವರೆಗೆ
4. ಡೈಮಂಡ್ ರಸ್ತೆ ತೇರಿ ಲೋಬೋ ಮನೆಯವರೆಗೆ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 206: ಉಳ್ಳಾಲ ಪುರಸಭೆ ವ್ಯಾಪ್ತಿಯ 20ನೇ ವಾರ್ಡಿನಲ್ಲಿ ಈ ಕೆಳಗಿನ ಕಾಮಗಾರಿ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಕು.ಭವಾನಿ ಇವರ ಮನವಿ ಕುರಿತು

1.ಗಾಂಧಿನಗರದಲ್ಲಿ 2ನೇ ಅಡ್ಡರಸ್ತೆ ಡಾಮಾರೀಕರಣ ಮತ್ತು ಕೃಷ್ಣ ಭಜನಾಮಂದಿರ ಎದುರಿನ ಅಡ್ಡರಸ್ತೆ ಡಾಮಾರೀಕರಣ

2.ಹರಿಶ್ಚಂದ್ರ ಮನೆಯಿಂದ ದಯಾನಂದನ ಮನೆಯವರೆಗೆ ಚರಂಡಿ ವ್ಯವಸ್ಥೆ

3.ಗಾಂಧಿನಗರ ಚಂದ್ರಹಾಸ ಮನೆಯಿಂದ ಪುಷ್ಪಾರವರ ಮನೆಯವರೆಗೆ ಚರಂಡಿಗೆ ಕಾಂಕ್ರೀಟು ವ್ಯವಸ್ಥೆ

4.ಕಾಫಿಕಾಡು 3ನೇ ಕ್ರಾಸ್ ರೋಡಿನ ಚರಂಡಿಗೆ ಕಾಂಕ್ರೀಟಿಕರಣ ಮತ್ತು ಫೇವರ್ ಫಿನಿಶ್ ಡಾಮಾರೀಕರಣ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹಣಕಾಸು ಲಭ್ಯವಿದ್ದಲ್ಲಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು

ವಿಷಯ: 207: ಉಳ್ಳಾಲ ಸೈಯ್ಯದ್ ಮದನಿ ದರ್ಗಾದ 19ನೇ ಉರೂಸು ಪ್ರಯುಕ್ತ ಅನುದಾನದ ಬಗ್ಗೆ ಸರ್ಕಾರದ ಅರ್ಥಿಕ ಇಲಾಖೆಯ ಕಚೇರಿಯಲ್ಲಿ ಕೆಲಸವಿರುವ ಕಾರಣ ದಿನಾಂಕ 31-12-2009ರ ಸಾಮಾನ್ಯ ಸಭೆಗೆ ಹಾಜರಾಗುವರೇ ಅಸಾಧ್ಯವಾಗಿದೆ ಎಂದು ಸದಸ್ಯರಾದ ಶ್ರೀ ಅಬ್ದುಲ್ ರಶೀದ್‌ರವರು ಬರಕೊಂಡ ದಿನಾಂಕ 28-12-2009ರ ಪತ್ರದ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉರೂಸ್ ಬಗ್ಗೆ ಬೆಂಗಳೂರಿಗೆ ಹೋಗಿರುವುದರಿಂದ ಗೈರುಹಾಜರಿಯನ್ನು ಮನ್ನಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 208: ಬಡತನ ರೇಖೆಗಿಂತ ಕೆಳಗಿರುವವರ ಪಟ್ಟಿಯನ್ನು ಪುನರ್‌ಗಣತಿ ಮಾಡುವರೇ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆಯುವ ಕುರಿತು

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ: 209: ಸ್ವರ್ಣ ಜಯಂತಿ ಶಹರೀ ರೋಜ್‌ಗಾರ್ ಯೋಜನೆಗೆ ಸಂಬಂಧಪಟ್ಟ ವಿಶೇಷ ಮಾಹಿತಿಯನ್ನು ಪುರಸಭಾ ಸದಸ್ಯರಿಗೆ ನೀಡುವ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸರಕಾರದಿಂದ ವಿಶೇಷವಾದ ಕಾರ್ಯಕ್ರಮಗಳ ಆದೇಶ ಬಂದಲ್ಲಿ ಮಾಹಿತಿ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 210: ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡಿನ ಅಲೇಕಲ ಬಂಡಸಾಲೆ ಸಂಪರ್ಕಿಸುವ ರಸ್ತೆಗೆ ಕಿರು ಸೇತುವೆ ನಿರ್ಮಿಸುವ ಬಗ್ಗೆ ಸ್ಥಳೀಯ ಸದಸ್ಯರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 211: ಉಳ್ಳಾಲ ಪುರಸಭೆ ವ್ಯಾಪ್ತಿಯ 6ನೇ ವಾರ್ಡು ಮಾರ್ಗತಲೆ ಉಳಿಯ ರಸ್ತೆಯಿಂದ ಯು,ಎಚ್.ಹಸನಬ್ಬರವರ ಮನೆಯವರೆಗೆ 2ಇಂಚಿನ ಕೊಳವೆ ಸಾಲು ಅಳವಡಿಸುವ ಕಾಮಗಾರಿಯ ಅಂದಾಜುಪಟ್ಟಿಗಿಂತ 50ಮೀ ಅಧಿಕ ಕೊಳವೆಸಾಲು ಅಳವಡಿಸಿದ ಬಿಲ್ಲಿನ ಮೊತ್ತ ಹೆಚ್ಚುವರಿ ರೂ 7965/- ಪಾವತಿಸುವರೇ ಕಿರಿಯ ಅಭಿಯಂತರರ ವರದಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹೆಚ್ಚುವರಿ ಬಿಲ್ಲಿನ ಮೊತ್ತ ರೂ. 7965/-ನ್ನು ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:212:ಉಳ್ಳಾಲ ಪುರಸಭಾ ವ್ಯಾಪ್ತಿಯ 3ನೇ ವಾರ್ಡು ಮೊಗವೀರಪಟ್ನ ಎಂಬಲ್ಲಿ 2ಬಾವಿಗಳ ಹೂಳು ತೆಗೆಯುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಡಿ. ಉಳ್ಳಾಲ್ ಇವರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಕಾಮಗಾರಿಯನ್ನು ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 213: ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ವಾಸುಕಿನಗರದಲ್ಲಿರುವ ತೆರೆದಬಾವಿಯ ಒಳಗಡೆ ಗಿಡಗಂಟಿ ಮತ್ತು ಕೆಸರು ತುಂಬಿದ್ದು ಇದನ್ನು ಶುಚಿಗೊಳಿಸುವಂತೆ ಪಂಪುಚಾಲಕರ ವರದಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಕಾಮಗಾರಿಯನ್ನು ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:214: ಉಳ್ಳಾಲ ಪುರಸಭಾ ವ್ಯಾಪ್ತಿಯ 4ನೇ ವಾರ್ಡಿನ ಮಂತ್ರದೇವತಾ ಕೊರಗಜ್ಜ ಸೇವಾಸಮಿತಿ ಬಂಡಿಕೊಟ್ಯ ಉಳ್ಳಾಲ ದೇವಸ್ಥಾನದ ಅಂಗಣಕ್ಕೆ ಮತ್ತು ಎದುರಿನ ರಸ್ತೆಗೆ ಇಂಟರ್‌ಲಾಕ್ ಅಳವಡಿಸುವಂತೆ ಸ್ಥಳೀಯ ಸದಸ್ಯರು ಮತ್ತು ಸಮಿತಿಯವರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:215: ಉಳ್ಳಾಲ ಪುರಸಭಾ ವ್ಯಾಪ್ತಿಯ 1ನೇ ವಾರ್ಡಿನ ಕೋಟೆಪುರ ಪ್ರದೇಶದ ಸಿ ರಸ್ತೆ ಸುಲ್ತಾನ್ ಸರ್ಕಲ್ ಬಳಿಯಿಂದ ಮೀನಿನ ಎಣ್ಣೆ ತೆಗೆಯುವ ಫ್ಯಾಕ್ಟರಿ ಕೊನೆಯವರೆಗೆ ವಿದ್ಯುತ್ ಕಂಬಗಳಿದ್ದು ಅದಕ್ಕೆ ದಾರಿದೀಪದ ಲೈನು ಎಳೆದು ದಾರಿದೀಪ ಅಳವಡಿಸುವಂತೆ ಸ್ಥಳೀಯ ಸದಸ್ಯರಾದ ಶ್ರೀ ಅಬ್ದುಲ್ ಸತ್ತಾರ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮೆಸ್ಕಾಂ ಇಲಾಖೆಗೆ ಪತ್ರ ಬರೆದು ನಂತರ ಪುರಸಭೆಯಿಂದ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 216: ಉಳ್ಳಾಲ ಪುರಸಭೆಯ ಕಚೇರಿಯ ಉಪಯೋಗಕ್ಕಾಗಿ ಜನರೇಟರ್ ಅಳವಡಿಸಲು ಪ್ಲಾಟ್‌ಫಾರಂ ಅಗತ್ಯವಿದ್ದು ಅದನ್ನು ರಚಿಸುವರೇ ಕಿರಿಯ ಅಭಿಯಂತರರ ವರದಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:217: ಉಳ್ಳಾಲ ಪುರಸಭೆ ವ್ಯಾಪ್ತಿಯ 18ನೇ ವಾರ್ಡಿನ ಉಳ್ಳಾಲಬೈಲು ಕಲ್ಲುರ್ಟಿ ದೈವಸ್ಥಾನ ಹಿಂದುಗಡೆಯಿರುವ ಚರಂಡಿ ಕಾಮಗಾರಿ ಅಪೂರ್ಣವಾಗಿದ್ದು, ಇದನ್ನು 3ನೇ ಹಂತದಲ್ಲಿ ಅದಷ್ಟು ಬೇಗನೇ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ದಯಾನಂದ ತೊಕ್ಕೊಟ್ಟು ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹಣಕಾಸು ಲಭ್ಯವಿದ್ದಲ್ಲಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:218: ಉಳ್ಳಾಲ ಪುರಸಭೆ ವ್ಯಾಪ್ತಿಯ 26ನೇ ವಾರ್ಡಿನ ಸೇವಂತಿಗುಡ್ಡೆ, ಬಬ್ಬುಕಟ್ಟೆ, ತಾರಿಪಡ್ಪು ಪ್ರದೇಶಗಳಲ್ಲಿ ನೀರಿನ ಅಭಾವವಿದ್ದು ಸದ್ರಿ ಸ್ಥಳಗಳಲ್ಲಿ 3 ಕೊಳವೆಬಾವಿಗಳನ್ನು ಕೊರೆದು ಪಂಪು ಅಳವಡಿಸಿ ವಿದ್ಯುತ್ ಸಂಪರ್ಕ ನೀಡಿ ಕೊಳವೆಸಾಲು ಅಳವಡಿಸುವಂತೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ್ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

( ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ